**ಹೆಂಡತಿ:** ರೀ... ಇವತ್ತು ಬೆಳಿಗ್ಗೆ ಕನ್ನಡಿಯಲ್ಲಿ ಮುಖ ನೋಡಿಕೊಂಡೆ. ಮುಖ ಸುಕ್ಕುಗಟ್ಟಿ ಅಸಹ್ಯವಾಗಿ ಕಾಣಿಸುತ್ತಿತ್ತು. ಏನಿದರ ಅರ್ಥ?
**ಗುಂಡ:** ಸಂತೋಷ ಪಡೇ, ಇದರರ್ಥ ನಿನ್ನ ದೃಷ್ಟಿಯಲ್ಲಿ ಯಾವ ದೋಷವೂ ಇಲ್ಲ ಅಂತ ಕಣೇ.

**ಹೆಂಡತಿ:** (ಮಧ್ಯರಾತ್ರಿ) ರೀ... ಏನೋ ಶಬ್ದ ಆಯ್ತು. ಕಳ್ಳ ಏನಾದ್ರೂ ಬಂದಿರಬಹುದಾ?
**ಗುಂಡ:** ಕಳ್ಳ ಬಂದ್ರೆ ಶಬ್ದ ಯಾಕೆ ಮಾಡ್ತಾನೆ? ಸುಮ್ನೆ ಮಲ್ಕೊಳೆ.
(ತುಸು ನಿಮಿಷದ ಬಳಿಕ)
**ಹೆಂಡತಿ:** ರೀ... ಈಗ ಶಬ್ದಾನೇ ಬರ್ತಿಲ್ಲಾ? ಕಳ್ಳ ಬಂದಿರ್ಬೇಕು. ಎದ್ದು ಹೋಗಿ ನೋಡ್ರಿ.

**ಸೈನ್ಸ್ ಮೇಷ್ಟ್ರು:** ಗುಂಡ ಜೀರ್ಣಕ್ರಿಯೆಯ ಬಗ್ಗೆ ವಿವರಣೆ ಕೊಡು.
**ಗುಂಡ:** ಸರ್ ಬಲಗೈನಿಂದ ಪ್ರಾರಂಭವಾಗಿ ಎಡಗೈನಲ್ಲಿ ಮುಕ್ತಾಯವಾಗುವ ಕ್ರಿಯೆಗೆ ಜೀರ್ಣಕ್ರಿಯೆ ಎನ್ನುತ್ತಾರೆ.





**ಗುಂಡ:** ಕಾಫಿಯಲ್ಲಿ ಸಕ್ಕರೆನೇ ಇಲ್ವಲ್ಲಾ?
**ವೇಟರ್:** ಹಾಕಿದ್ದೀನಿ ಸರ್!
**ಗುಂಡ:** ಒಂದು ಸಿಪ್ ಕುಡಿದು ನೋಡು ಗೊತ್ತಾಗುತ್ತದೆ.
**ವೇಟರ್:** ತರುವಾಗ ಕುಡಿತಾನೇ ತಂದೆ ಸರ್! ಸಕ್ಕರೆ ಸರಿಯಾಗೇ ಇದೆ.


**ಮ್ಯಾನೇಜರ್:** ಯಾಕೆ ನಿಮ್ಮ ರೆಸ್ಯೂಮ್‌ನಲ್ಲಿ ಸ್ವಿಮ್ಮಿಂಗ್ ಅನ್ನು ಹವ್ಯಾಸ ಎಂದು ಬರೆದಿದ್ದೀರಿ?
**ಗುಂಡ:** ಬೆಂಗಳೂರಿನಲ್ಲಿ ಮಳೆ ಬಿದ್ರೂ ನಾನು ಸ್ವಿಮ್ ಮಾಡ್ಕೊಂಡೇ ಆಫೀಸ್‌ಗೆ ಬರಬಲ್ಲೆ ಅಂತ ಸರ್!
**ಮ್ಯಾನೇಜರ್:** ನಾಳೆಯೇ ಕೆಲಸಕ್ಕೆ ಬನ್ನಿ.

**ಗುಂಡ:** ನನ್ನ ಹೆಂಡತಿಗೆ ಸ್ಲಿಪ್ಪರ್ ಬೇಕಿತ್ತು.
**ಅಂಗಡಿಯವನು:** ಸೈಜ್ ಎಷ್ಟು? ಯಾವ ಥರದ್ದು ಬೇಕು?
**ಗುಂಡ:** ನಂಬರ್ 6 ಸೈಜ್! ಆದ್ರೆ ತುಂಬ ಸ್ಮೂತ್ ಆಗಿರಬೇಕು. ಹೊಡೆದ್ರೂ ನೋವಾಗಲೇಬಾರದು. ಅಂಥದ್ದು ಇದ್ರೆ ಮಾತ್ರ ಕೊಡಿ.

ಸಂಗ್ರಹ: ಶರದ ಕುಲಕರ್ಣಿ, ಬೀದರ್

**ಹೆಂಡತಿ:** ರೀ... ಕಾಮನಬಿಲ್ಲಲ್ಲಿ ಕಪ್ಪು ಬಣ್ಣ ಯಾಕಿಲ್ಲ?
**ಗುಂಡ:** ಹೌದು ಯಾಕಿಲ್ಲ?
**ಹೆಂಡತಿ:** ಯಾಕಂದ್ರೆ ಕಪ್ಪೆಲ್ಲ ನಿಮ್ಮ ಮೈಗೇ ಅಂಟಿದೆ ಅಲ್ವಾ, ಅದಕ್ಕೆ.




**ಅಪ್ಪ:** ಏನೋ... ಒಂದೇ ಒಂದು ಮಾರ್ಕ್ ತಗೊಂಡಿದ್ದೀಯಾ?
**ಮಗ:** ಸುಮ್ನೆ ಇರಪ್ಪ ನಮ್ ಮೇಷ್ಟ್ರಿಗೆ ಅವಮಾನ ಮಾಡ್ಬೇಡ.
**ಅಪ್ಪ:** ಯಾಕೋ?
**ಮಗ:** ಅವರು ಕೊಟ್ಟಿರೋದು ಒಂದೇ ಒಂದ್ ಮಾರ್ಕ್ ಅಲ್ಲ, ನಂಬರ್ ಒನ್ ಮಾರ್ಕ್.

**ಹೆಂಡತಿ:** ನನ್ ಹೆಸರಲ್ಲಿ ಒಂದ್ ಸೈಟ್ ಇದೆ. ನಿನ್ ಹೆಸ್ರಲ್ಲಿ ಏನಿದೆ?
**ಗುಂಡ ಗಿರೀಶ:** ನನ್ ಹೆಸರಿನಲ್ಲಿ ಸವರ್ಣ ದೀರ್ಘ ಸಂಧಿ ಇದೆ.

**ಅಪ್ಪ:** ಏನಮ್ಮಾ... ಎಂಥ ಕೆಲಸ ಮಾಡ್ಬಿಟ್ಟೆ. ಅಡಿಕೊಳ್ಳೋರ ಬಾಯಿಗೆ ಎಲೆ ಅಡಿಕೆ ಆಗೋದ್ವಲ್ಲಮ್ಮ?
**ಮಗಳು:** 'ನಾವು ಮಾತಾಡಬಾರ್ದು, ನಮ್ಮ ಕೆಲಸಗಳು ಮಾತಾಡ್ಬೇಕು' ಅಂತ ನೀವೇ ಆಗಾಗ ಹೇಳ್ತಾ ಇದ್ರಲ್ವ ಅಪ್ಪ.

**ಗುಂಡ:** ಬರಿ ಗೇಟ್‌ಗೆ ಬೀಗ ಹಾಕಿದ್ದೀಯಾ... ಕಾಂಪೌಂಡಿಗೂ ಸೇರಿಸಿ ಹಾಕೋದು ತಾನೆ?
**ಹೆಂಡತಿ:** ಹೇಳಿದಷ್ಟು ಮಾಡು ಅಂತಿರ್ತೀಯಾ. ಗೇಟ್‌ಗೆ ಬೀಗ ಹಾಕು ಅಂದೆ ಹಾಕಿದ್ದೀನಿ ಅಷ್ಟೇ.

**ಹೆಂಡತಿ:** ನನ್ನ ಹತ್ರ ನಿಂದೇನೂ ನಡೆಯಲ್ಲ.
**ಗಂಡ:** ನನ್ನ ಕಾಲುಗಳು ನಡೆದೇ ನಡೆಯುತ್ತವೆ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ